# ಪ್ರೀತಿ ಪ್ರೇಮ ಡ್ರಾಮ

ಟಿ. ತಿಮ್ಮಪ್ಪ

## ಸುನಿಲ್ ಮನೆಗೆ ಬಂದ ಆಗಂತುಕ

ಯೋಚಿಸುತ್ತಿದ್ದಂತೆಯೇ ನನ್ನ ಆತಂಕ ಹೆಚ್ಚಾಗಿ ಎದೆ ಬಡಿತ ಜೋರಾಯಿತು. ಜೋರಾಗಿ ಉಸಿರೆಳೆದುಕೊಂಡು ಪ್ರಯತ್ನಪಟ್ಟು ಅದನ್ನು ತಹಬದಿಗೆ ತಂದುಕೊಂಡು ನಿಧಾನವಾಗಿ ಆಲೋಚಿಸಿದೆ. ಈಗ ಬಂದಿರುವ ಸಮಸ್ಯೆಯನ್ನು ನಿರ್ಲಕ್ಷಿಸಿದರೆ ಅದು ಬೃಹದಾಕಾರ ತಾಳಿ ನನ್ನ ಸಾಂಸಾರಿಕ ನೆಮ್ಮದಿಯನ್ನೇ ಕಸಿದುಕೊಳ್ಳಬಹುದು. ಈ ಸಮಸ್ಯೆಯನ್ನು ತಕ್ಷಣವೇ ಪರಿಹರಿಸಿಕೊಳ್ಳಬೇಕು. ಅದಕ್ಕೆಂದೇ ನನ್ನ ಒಂದಷ್ಟು ಸಮಯವನ್ನು ಮೀಸಲಿಡಬೇಕು.. ಈ ಗಿರಿಧರ ಎನ್ನುವ ಆಗಂತುಕ ಮತ್ತೆ ಭಾನುವಾರ ಬರುವುದಾಗಿ ತಿಳಿಸಿ ಹೋಗಿದ್ದಾನೆ. ಅಲ್ಲಿಯವರೆಗೂ ಕಾಯುವ ತಾಳ್ಮೆ ನನಗಿಲ್ಲ. ನಾಳೆಯಿಂದಲೇ ಈ ಸಮಸ್ಯೆಗೆ ಪರಿಹಾರ

